


ಮೊಹಮ್ಮದ್ ಶಮಿ ಕೈಬೆರಳ ನೋವಿಗೆ ಸ್ಪಂದಿಸುತ್ತಿರುವ ಸಹ ಆಟಗಾರರು




ಪದೇ ಪದೇ ನೋವಿನ ಸಮಸ್ಯೆ ಎದುರಿಸುತ್ತಿರುವ ಕೆ.ಎಲ್. ರಾಹುಲ್

ಮಧ್ಯಮ ಓವರ್‌ಗಳಲ್ಲಿ ವಿಕೆಟ್ ಪಡೆಯಲು ಸಾಧ್ಯವಾಗದ ತಮ್ಮ ಬೌಲರ್‌ಗಳ ಅಸಮರ್ಥತೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದರು. ಸ್ಪಿನ್ನರ್‌ಗಳು ವಿಕೆಟ್ ಕಬಳಿಸಲು ಪರದಾಡಿದರು. ಈ ಎಲ್ಲಾ ಲೋಪಗಳು ಭಾರತದ ಭವಿಷ್ಯ, ಆಟಗಾರರ ಸ್ಥಿರತೆ ಮತ್ತು ಫಿಟ್‌ನೆಸ್ ಕುರಿತು ಎತ್ತಿದ ಪ್ರಶ್ನೆಗಳೇ ಆಗಿವೆ. ಇದರ ಬೆನ್ನಲ್ಲೇ 1983ರ ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡವನ್ನು ಮುನ್ನಡೆಸಿದ್ದ ಕಪಿಲ್ ದೇವ್ ಹೇಳಿದ ಮಾತು ಚರ್ಚೆಯಾಗಬೇಕಾದ ವಿಷಯವೇ:

‘ಈಗಿನ ಆಟಗಾರರು ದೇಶಕ್ಕಿಂತ ಐಪಿಎಲ್‌ಗೆ ಆದ್ಯತೆ ನೀಡುತ್ತಿದ್ದಾರೆ. ಇದನ್ನು ತಪ್ಪಿಸಲು ಸಮರ್ಪಕ ವೇಳಾಪಟ್ಟಿಯನ್ನು ರೂಪಿಸುವ ಜವಾಬ್ದಾರಿ ಬಿಸಿಸಿಐ ಮೇಲಿದೆ. ವಿಶ್ವಕಪ್ ಗೆಲ್ಲುವುದರ ಮೂಲಕ ಭಾರತದ ಕ್ರಿಕೆಟ್ ಸಾಧನೆ ಮುಗಿದಿದೆ ಎನ್ನುವ ಮನೋಭಾವನೆಯಿಂದ ಹೊರಬನ್ನಿ. ದೇಶಕ್ಕಾಗಿ ಆಡುವಾಗ ಆಟಗಾರರನ್ನು ಹೆಮ್ಮೆಯ ಭಾವದಿಂದ ನೋಡಬಹುದು. ಐಪಿಎಲ್‌ಗೆ ಆಡುವಾಗ ಏನೆನ್ನಬೇಕು ಗೊತ್ತಿಲ್ಲ. ಐಪಿಎಲ್‌ನಲ್ಲಿ ಆಡುವುದು ತಪ್ಪು ಎಂದು ಹೇಳುತ್ತಿಲ್ಲ; ದೇಶವೇ ಆದ್ಯತೆಯಾಗಬೇಕು ಎನ್ನುವ ಕಪಿಲ್ ದೇವ್ ಮಾತುಗಳಲ್ಲಿ ಯೋಚಿಸಬೇಕಾದ ಹಲವು ಸಂಗತಿಗಳಿವೆ.

## ಗ್ರಾಮೀಣ ಬೇರಿಗೆ ಬೇಕು ಜೀವಜಲ

ಭಾರತದ ಕ್ರಿಕೆಟ್‌ನ ಗಟ್ಟಿ ಬುನಾದಿ ಇರುವುದೇ ದೇಶದ ಗ್ರಾಮೀಣ ಪ್ರದೇಶಗಳಲ್ಲಿ. ಹಳ್ಳಿಗಳ ಅಂಗಳಕ್ಕೆ ರಣಜಿ ಕ್ರಿಕೆಟ್ ತೆಗೆದುಕೊಂಡು ಹೋಗಬೇಕಾಗಿದೆ.

ಕರ್ನಾಟಕದ ಮಟ್ಟಿಗೆ ಹೇಳುವುದಾದರೆ, ಈಗಾಗಲೇ ರಾಷ್ಟ್ರೀಯ ತಂಡದಲ್ಲಿ ಹೆಸರು ಮಾಡಿರುವ ಮನೀಷ್ ಪಾಂಡೆ, ಮಯಂಕ್ ಅಗರವಾಲ್ ಅವರು ಕ್ರಿಕೆಟ್ ಆಡುವುದನ್ನು ನೋಡುವ ಸಲುವಾಗಿಯೇ ಹಳ್ಳಿಗಳಲ್ಲಿ ಸಾವಿರಾರು ಜನ ಕಾದಿರುತ್ತಾರೆ. ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ, ಶಿವಮೊಗ್ಗ ಮತ್ತು ಬೆಳಗಾವಿ ಬಿಟ್ಟರೆ ಇತ್ತೀಚೆಗಿನ ವರ್ಷಗಳಲ್ಲಿ ರಾಜ್ಯದಲ್ಲಿ ಎಲ್ಲಿಯೂ ರಣಜಿ ಪಂದ್ಯಗಳನ್ನು ಆಯೋಜಿಸಿಲ್ಲ. ಬೇರೆ ನಗರಗಳಲ್ಲಿ ಬಿಸಿಸಿಐ ನಿಯಮಗಳಿಗೆ ಅನುಗುಣವಾಗಿ ಕ್ರೀಡಾಂಗಣಗಳು ಇಲ್ಲ. ಎಲ್ಲರೂ ಬೆಂಗಳೂರಿಗೆ ಬಂದು ಆಡಲು ಸಾಧ್ಯವಿಲ್ಲ. ಹಾಗಾಗಿ ಸ್ಥಳೀಯವಾಗಿಯೇ ಅಕಾಡೆಮಿಗಳನ್ನು ಆರಂಭಿಸಿ ತರಬೇತಿ ನೀಡಬೇಕು. ಗ್ರಾಮೀಣ ಪ್ರದೇಶದಲ್ಲಿ ಸಾಕಷ್ಟು ಪ್ರತಿಭಾವಂತ ಆಟಗಾರರು ಇದ್ದರೂ ಅವರಿಗೆ ಹೇಗೆ ಮುನ್ನಡೆಯಬೇಕು ಎನ್ನುವ ಮಾರ್ಗದರ್ಶನದ ಕೊರತೆ ಕಾಡುತ್ತಿದೆ.

ಹೊಸ ಪ್ರತಿಭೆಗಳು ಉದಯಿಸಲು ಶಾಲಾ ಕ್ರಿಕೆಟ್ ಟೂರ್ನಿಗಳು ಪ್ರಮುಖ ವೇದಿಕೆಯಾಗಿವೆ. ಈಗಿನ ಶೈಕ್ಷಣಿಕ ವ್ಯವಸ್ಥೆಯಲ್ಲಿ ಓದು ಹಾಗೂ ಕ್ರಿಕೆಟ್ ಎರಡೂ ಸಮತೋಲಿತವಾಗಿ ಸಾಗುವಂತೆ ಯೋಜನೆ ರೂಪಿಸಬೇಕು. 14 ಹಾಗೂ 16 ವರ್ಷದ ಒಳಗಿನ ಮಕ್ಕಳಿಗೆ ಆಕರ್ಷಕ ಬಹುಮಾನ ಮೊತ್ತ, ಪ್ರಶಸ್ತಿಗಳನ್ನು ನಿಗದಿ ಮಾಡಿ ಶಾಲಾ ಟೂರ್ನಿಗಳಿಗೆ ಆದ್ಯತೆ ನೀಡಬೇಕು. ರಾಜ್ಯದಲ್ಲಿ ಬೆಂಗಳೂರು ಹೊರತುಪಡಿಸಿದರೆ ಶಾಲಾ ಟೂರ್ನಿಗಳಿಗೆ ಬರುವ ತಂಡಗಳ ಸಂಖ್ಯೆ ಬೆರಳೆಣಿಕೆಯನ್ನೂ ದಾಟುವುದಿಲ್ಲ.

ಶಾಲಾ ತಂಡಗಳನ್ನು ಬಲಿಷ್ಠಗೊಳಿಸಬೇಕು ಎನ್ನುವ ಉದ್ದೇಶದಿಂದ ಹುಬ್ಬಳ್ಳಿಯಲ್ಲಿ ಕೆಲ ಕ್ಲಬ್‌ಗಳು ಬಾಲಕ ಹಾಗೂ ಬಾಲಕಿಯರು ಇಬ್ಬರನ್ನೂ ಒಳಗೊಂಡ 14 ಮತ್ತು 16 ವರ್ಷದ ಒಳಗಿನವರ ಟೂರ್ನಿ ಆಯೋಜಿಸಿದ್ದವು. ಧಾರವಾಡ ಜಿಲ್ಲೆಯಲ್ಲಿ ನೂರಾರು ಶಿಕ್ಷಣ ಸಂಸ್ಥೆಗಳಿದ್ದರೂ ಪಾಲ್ಗೊಂಡಿದ್ದು ನಾಲ್ಕೈದು ತಂಡಗಳು ಮಾತ್ರ. ಇದೊಂದು ಉದಾಹರಣೆಯಷ್ಟೇ. ಇದೇ ರೀತಿಯ ಪರಿಸ್ಥಿತಿ ಬಹುತೇಕ ಎಲ್ಲ ಕಡೆಯೂ ಇದೆ.

ಗ್ರಾಮೀಣ ಮಟ್ಟದಲ್ಲಿ ಇರುವ ಕೊರತೆಗಳನ್ನು ಪ್ರತಿಬಾರಿಯೂ ನೋಡಿದಾಗ ರಣಜಿಗೆ ಇನ್ನಷ್ಟು ಮಹತ್ವ ಸಿಗಬೇಕು, ಕ್ರಿಕೆಟ್ ಮೂಲ ಸೌಂದರ್ಯ ಉಳಿಯಬೇಕು ಎನ್ನುವ ಅಭಿಪ್ರಾಯ ಮತ್ತಷ್ಟು ಗಟ್ಟಿಯಾಗುತ್ತದೆ. ಹಾಗಾಗಿಯೇ, ‘ರಣಜಿ ಟ್ರೋಫಿ ಟೂರ್ನಿ ನಿರ್ಲಕ್ಷಿಸಿದರೆ ಭಾರತದ ಕ್ರಿಕೆಟ್‌ನ ಬೆನ್ನುಹುರಿಯೇ ಇಲ್ಲದಂತಾಗುತ್ತದೆ’ ಎನ್ನುವ ರವಿಶಾಸ್ತ್ರಿ ಅವರ ಮಾತನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳಬೇಕಾಗಿದೆ.

ಪ್ರತಿಕ್ರಿಯಿಸಿ: feedback@sudha.co.in